ಗರ್ಭಕ್ಕೆ ಕುತ್ತು ತರುವ ಹೈಡ್ರೋಸಾಲ್ಪಿಂಕ್ಸ್

ಮಹಿಳೆಯರು ಗರ್ಭಧರಿಸಲು ಅವರ ಗರ್ಭಕೋಶ ಆರೋಗ್ಯದಿಂದಿರುವುದ ಅತ್ಯವಶ್ಯಕ ಅಷ್ಟೇ ಅಲ್ಲ, ಅದರ ಜೊತೆ ಜೊತೆಗೆ ಗರ್ಭಕೋಶಕ್ಕೆ ಹೊಂದಿಕೊಂಡಂತೆ ಇರುವ ಫೆಲೋಪಿಯನ್ ನಾಳಗಳು ಕೂಡ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರಬೇಕು. ಫೆಲೋಪಿಯನ್ ನಾಳಗಳ ಮುಖ್ಯ ಕೆಲಸ ಅಂಡಾಶಯದಿಂದ ಗರ್ಭಕೋಶದ ತನಕ ಅಂಡಾಣುಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಸಾಗಿಸುವುದಾಗಿದೆ. ಮಿಲನದ ಸಂದರ್ಭದಲ್ಲಿ ವೀರ್ಯಾಣು ಫೆಲೋಪಿಯನ್ ನಾಳದಲ್ಲಿ ಪ್ರವೇಶಿಸಿದಾಗ ಭ್ರೂಣ ಉತ್ಪತ್ತಿಗೆ ಅನುಕೂಲಕರ ವಾತಾವರಣ ಸೃಷ್ಟಿಯಾಗುತ್ತದೆ. ಒಂದು ವೇಳೆ ಫೆಲೋಪಿಯನ್ ನಾಳದಲ್ಲಿ ಯಾವುದಾದರೂ ತೊಂದರೆಯಾದರೆ, ಅವುಗಳಿಗೆ ಹಾನಿಯುಂಟಾದರೆ ಗರ್ಭಧಾರಣೆ ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ. ಇದೇ ಕಾರಣದಿಂದ ಮಹಿಳೆ ಬಂಜೆತನಕ್ಕೆ ತುತ್ತಾಗುತ್ತಾಳೆ.

ಫೆಲೋಪಿಯನ್ ನಾಳಗಳಲ್ಲಿ ಉಂಟಾಗುವ ತೊಂದರೆಯನ್ನು ಹೈಡ್ರೋಸಾಲ್ಪಿಂಕ್ಸ್ ಎಂದು ಹೇಳಲಾಗುತ್ತದೆ. ಈ ಸ್ಥಿತಿಯಲ್ಲಿ ಫೆಲೊಪಿಯನ್ ನಾಳದಲ್ಲಿ ನೀರು ತುಂಬಿಕೊಂಡು ಅದು ದಪ್ಪಗಾಗುತ್ತ ಹೋಗುತ್ತದೆ.

ಹೀಗಾಗಲು ಏನು ಕಾರಣ?

- ಸೋಂಕು ತಗುಲುವುದರಿಂದ ಫೆಲೊಪಿಯನ್ ನಾಳದ ಮಧ್ಯಭಾಗ ಇಲ್ಲವೆ ಕೊನೆಯ ಭಾಗ ಮುಚ್ಚಿಕೊಳ್ಳುತ್ತದೆ (PID)
- ಹಳೆಯ ಸರ್ಜರಿಯಿಂದ ಇಲ್ಲವೆ ಎಕ್ಟೊಪಿಕ್ ಗರ್ಭದಿಂದಾಗಿ ಫೆಲೊಪಿಯನ್ ನಾಳ ಮುಚ್ಚಿಕೊಳ್ಳುತ್ತದೆ. ಹೆಚ್ಚಾಗಿ ಕೊನೆಯ ಭಾಗವೇ ಊದಿಕೊಳ್ಳುತ್ತದೆ.
- ರೋಗ ಉಲ್ಬಣಗೊಂಡಾಗ ನಾಳ ಎರಡೂ ಬದಿಯೂ ಮುಚ್ಚಿಕೊಳ್ಳುತ್ತದೆ.
- ಟಿ.ಬಿ. ರೋಗದಿಂದ

ಮುಖ್ಯ ಲಕ್ಷಣಗಳು

- ಯಾವುದೇ ಮುಖ್ಯಲಕ್ಷಣಗಳು ಗೋಚರಿಸದಿರಬಹುದು.
- ಕ್ಷಯರೋಗದಿಂದ ಫೆಲೋಪಿಯನ್ ನಾಳಗಳಿಗೆ ಹಾನಿಯುಂಟಾಗಿ ಬಂಜೆತನಕ್ಕೆ ಕಾರಣವಾಗಬಹುದು.
- ಅಪೆಂಡಿಸೈಟಿಸ್ ತೊಂದರೆ ಉಂಟಾದಾಗ ಅದರ ಪಕ್ಕದಲ್ಲಿಯೇ ಇರುವ ಫೆಲೋಪಿಯನ್ ಟ್ಯೂಬಿಗೂ ಸೋಂಕು ತಗುಲಬಹುದು.
- ಮದುವೆಯ ಬಳಿಕ ಮುಟ್ಟಿನ ಸಮಯದಲ್ಲಿ ಸ್ವಚ್ಛತೆಯ ಬಗ್ಗೆ ಗಮನಹರಿಸದೇ ಇದ್ದಲ್ಲಿ ಈ ತೊಂದರೆ ಉದ್ಭವಿಸಬಹುದು.
- ಕಿಬ್ಬೊಟ್ಟೆ ನೋವು ಎಡ ಅಥವಾ ಬಲ ಭಾಗದಲ್ಲಿ ಕಾಣಿಸಿಕೊಳ್ಳಬಹುದು.
- ಮುಟ್ಟಿನ ಮುಂಚೆ ಹಾಗೂ ನಂತರ ತೀವ್ರ ಹೊಟ್ಟೆ ನೋವು ಕಾಣಿಸಿಕೊಳ್ಳಬಹುದು.
- ನೀರಿನ ಹಾಗೆ ಹೋಗುವ ಬಿಳಿ ದ್ರವ.

ಪರೀಕ್ಷೆ ಹೇಗೆ?

- ಅಲ್ಟ್ರಾ ಸೊನೊಗ್ರಫಿ ಪರೀಕ್ಷೆಯ ಮುಖಾಂತರ ಸಮಸ್ಯೆ ಏನೆಂಬುದು ನಿಖರವಾಗಿ ತಿಳಿದುಬರುತ್ತದೆ. ವೆಜೈನಲ್ ಸ್ಕ್ಯಾನಿಂಗ್‌ನಿಂದ ಅತ್ಯಂತ ಚಿಕ್ಕ ಪ್ರಮಾಣದ ಹೈಡ್ರೋಸಾಲ್ಪಿಂಕ್ಸ್ ಕೂಡ ಕಂಡುಬರುತ್ತದೆ.
- ಸ್ಕ್ಯಾನಿಂಗ್‌ನಲ್ಲಿ ಕಂಡುಬರದ ಕೆಲವು ಸೂಕ್ಷ್ಮ ತೊಂದರೆಗಳು ಲ್ಯಾಪ್ರೊಸ್ಕೊಪಿಕ್ ಪರೀಕ್ಷೆಯಲ್ಲಿ ಗೋಚರಿಸುತ್ತದೆ.

ಟ್ಯೂಬ್ ಟೆಸ್ಟಿಂಗ್

ಗರ್ಭಚೀಲದ ಮೂಲೆಯೊಳಗೆ ಫೆಲೋಪಿಯನ್ ಟ್ಯೂಬಿನ ಒಂದು ಬದಿಯಿಂದ ಇನ್ನೊಂದು ಭಾಗಕ್ಕೆ ಬಣ್ಣದ ಔಷಧಿಯನ್ನು ಹರಿಬಿಡಲಾಗುತ್ತದೆ.

ಆ ಬಣ್ಣದ ಔಷಧಿ ಆರಂಭದಿಂದ ಅಂತ್ಯದವರೆಗೂ ಸರಾಗವಾಗಿ ಹರಿದರೆ ಯಾವುದೇ ತೊಂದರೆ ಇಲ್ಲವೆಂದು ಅರ್ಥ. ಅಕಸ್ಮಾತ್ ನಾಳದ ಕೊನೆಯ ಭಾಗದಲ್ಲಿ ಹರಿಯದೆ ಹಾಗೆಯೇ ನಿಂತು ಚುಟ್ಟರೆ ಅಂಚಿನಲ್ಲಿ ತುಸು ಅಂಟಿಕೊಂಡಿರುವುದು ಖಚಿತವಾಗುತ್ತದೆ. ಅದನ್ನು ಕ್ಯಾನುಲೇಷನ್ ಪ್ರಕ್ರಿಯೆಯಿಂದ ನಾಳಗಳು ವ್ಯವಚ್ಛೇರವಾದನ್ನು ನಿವಾಲಿಸಲಾಗುತ್ತದೆ.

ಚಿಕಿತ್ಸೆ ಹೇಗೆ?

- ಹೈಡ್ರೋಸಾಲ್ಪಿಂಕ್ಸ್ ಅತ್ಯಂತ ಚಿಕ್ಕಪ್ರಮಾಣದಲ್ಲಿ ಇದ್ದರೆ ಆ್ಯಂಟಿಬಯಾಟಿಕ್‌ಗಳನ್ನು ಕೊಟ್ಟು ಗುಣಪಡಿಸಲಾಗುತ್ತದೆ.
- ಕಿಬ್ಬೊಟ್ಟೆ ನೋವು ತುಂಬಾ ಸತಾಯಿಸುತ್ತಿದ್ದರೆ ಅದಕ್ಕೆ ಸೂಕ್ತ ಚಿಕಿತ್ಸೆ ಕೊಡಬೇಕಾಗುತ್ತದೆ.

ಲ್ಯಾಪ್ರೋಸ್ಕೋಪಿಕ್ ಚಿಕಿತ್ಸೆ

ಒಟ್ಟು ಸಣ್ಣ ರಂಧ್ರದ ಮೂಲಕ ಟೆಲಿಸ್ಕೋಪ್ ಗಳನ್ನು ತೂರಿಸಿ ಫೆಲೋಪಿಯನ್ ಟ್ಯೂಬ್‌ಗಳ ಬ್ಲಾಕ್‌ನ್ನು ನಿವಾರಿಸಲಾಗುತ್ತದೆ.

ಮಹಿಳೆಯ ಕುಟುಂಬ ಪೂರ್ಣಗೊಂಡಿದ್ದರೆ, ಇನ್ನು ಮುಂದೆ ಟ್ಯೂಬ್‌ನ ಅವಶ್ಯಕತೆ ಇಲ್ಲದೆ ಇದ್ದರೆ ಟ್ಯೂಬ್‌ನ್ನು ತೆರೆಯಲಾಗುತ್ತದೆ.

ಐ.ವಿ.ಎಫ್ ಮತ್ತು ಹೈಡ್ರೋಸಾಲ್ಪಿಂಕ್ಸ್

ಮಹಿಳೆಗೆ ಫೆಲೋಪಿಯನ್ ಟ್ಯೂಬ್‌ಗಳು ರೋಗಗ್ರಸ್ಥವಾಗಿದ್ದ ಸಂದರ್ಭದಲ್ಲಿ ವೈದ್ಯರು ಐ.ವಿ.ಎಫ್ ಮುಖಾಂತರ ಮಗು ಪಡೆಯಲು ಸಲಹೆ ನೀಡುತ್ತಾರೆ.

ಐ.ವಿ.ಎಫ್. ನಿರ್ಧಾರ ಕೈಗೊಂಡ ಸಂದರ್ಭದಲ್ಲಿ ಫೆಲೋಪಿಯನ್ ಟ್ಯೂಬ್‌ಗಳ ವ್ಯಾಖಾಂತರ ಕಲುಷಿತ ನೀರು ಗರ್ಭಕೋಶದೊಳಗೆ ಬರುತ್ತಿರುತ್ತದೆ.

ಅಂತಹ ಸಂದರ್ಭದಲ್ಲಿ ವೈದ್ಯರು ಫೆಲೋಪಿಯನ್ ನಾಳಗಳಿಗೆ ಕ್ಲಿಪ್ಪಿಂಗ್ ಮಾಡಿ ಕೆಟ್ಟ ನೀರು ಗರ್ಭಕೋಶಕ್ಕೆ ಬರುವುದನ್ನು ನಿಯಂತ್ರಿಸುತ್ತಾರೆ. ಆಗ ಐ.ವಿ.ಎಫ್. ಪ್ರಕ್ರಿಯೆ ಸುಲಭವಾಗುತ್ತದೆ.

ಚಿಕಿತ್ಸೆಯ ಬಳಿಕ

- ಹೈಡ್ರೊಸಾಲ್ಪಿಂಕ್ಸ್‌ಗೆ ಚಿಕಿತ್ಸೆ ಪಡೆದ ಮಹಿಳೆ ಸೊಂಕು ಹರಡದ ಹಾಗೆ ಎಚ್ಚರಿಕೆ ವಹಿಸಬೇಕು.
- ಸೋಂಕಿನ ಒಂದರೆಯಿಂದ ಚಿಕಿತ್ಸೆ ಪಡೆದಲ್ಲಿ 1-2 ತಿಂಗಳುಗಳ ಕಾಲ ಔಷಧಿ ಸೇವನೆ ಮಾಡಬೇಕಾಗುತ್ತದೆ.
- ಕ್ಷಯರೋಗದ ಕಾಯಿಲೆಯಿಂದ ಸೋಂಕಿಗೆ ಚಿಕಿತ್ಸೆ ಪಡೆದಿದ್ದರೆ 6-8 ತಿಂಗಳ ಕಾಲ ಸತತ ಔಷಧಿ ಸೇವನೆ ಮಾಡುತ್ತಿರಬೇಕಾಗುತ್ತದೆ.
- ಸೋಂಕು ಹರಡದ ಹಾಗೆ ದಂಪತಿಗಳು ಕಾಂಡೋಮ್ ಬಳಸಬೇಕು.

ಲ್ಯಾಪ್ರೋಸ್ಕೋಪಿಕ್ ಸರ್ಜರಿಯೇ ಏಕೆ ಸೂಕ್ತ?

ಅತ್ಯಂತ ಸಣ್ಣ ರಂಧ್ರದ ಮೂಲಕ ಮಾಡುವ ಈ ಶಸ್ತ್ರಚಿಕಿತ್ಸೆಯಿಂದ ಬಹುಬೇಗ ಮನೆಗೆ ಹೋಗಬಹುದು.

– ಡಾ॥ ಬಿ. ರಮೇಶ್

ಹೈಡ್ರೋಸಾಲ್ಪಿಂಕ್ಸ್ ಚಿಕಿತ್ಸೆಯ ಹೆಚ್ಚಿನ ಮಾಹಿತಿ ಮತ್ತು ಚಿಕಿತ್ಸೆಗಾಗಿ ಸಂಪರ್ಕಿಸಿ:

ಆಲ್ಟಿಯಸ್ ಹಾಸ್ಪಿಟಲ್

(Unit of Dr. Ramesh Hospital)

ಹೈಟೆಕ್ ಲ್ಯಾಪ್ರೋಸ್ಕೊಪಿ & ಗೈನೊಕಾಲಜಿ ಹಾಸ್ಪಿಟಲ್

ರಾಜಾಜಿನಗರ:
ನಂ.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್,
ರಾಜಾಜಿನಗರ ಎಂಟ್ರೆನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಎದುರು,
ರಾಮಮಂದಿರ ಹತ್ತಿರ, ಬೆಂಗಳೂರು–10.
ಫೋ: 080-23151873 Mob: 9900031842

ರಾಜರಾಜೇಶ್ವರಿನಗರ:
ನಂ.915, 1ನೇ ಮಹಡಿ, ಧನುಷ್ ಪ್ಲಾಜಾ,
ಐಡಿಯಲ್ ಹೋಮ್ಸ್ ಟೌನ್‌ಷಿಪ್, ಗೋಪಾಲನ್‌ಮಾಲ್ ಹತ್ತಿರ,
ರಾಜರಾಜೇಶ್ವರಿನಗರ, ಬೆಂಗಳೂರು–98.
ಫೋ: 080-28606789 Mob: 9663311128

E-mail: endoram2006@yahoo.in, Website: www.laparoscopicsurgeries.com